

# ಜಗತ್ತಿನಲ್ಲೇ ಅತಿ ಹೆಚ್ಚು ಜನ ನೋಡಿದ ಫೋಟೊ!

ಇಲ್ಲಿರುವ ಫೋಟೋ ನೋಡಿ. ನೀವು ಕಂಪ್ಯೂಟರ್ ಬಳಸುವವರಾದರೆ ನೋಡೇ ಇರುತ್ತೀರಿ. ನಿಮ್ಮ ಕಂಪ್ಯೂಟರ್ ಸ್ವಿಚ್ ಆನ್ ಮಾಡಿದ ಕೂಡಲೇ ಡೆಸ್ಕ್‌ಟಾಪ್‌ನಲ್ಲಿ 'ಹಸಿರು ಹುಲ್ಲು ಹಾಸಿನ ಮೇಲೆ ಹಾಲು ಬಣ್ಣದ ಮೇಘಗಳಿಂದ ಕೂಡಿದ ನೀಲ ದಿಗಂತ'ದ ಈ ಚಿತ್ರ ಕಾಣಿಸುತ್ತದೆ. ಇದೊಂದು ಅದ್ಭುತ ಫೋಟೋ. ಚಿತ್ರ ಒಳಗೊಂಡ ಪ್ರಕೃತಿ ಸೌಂದರ್ಯದಿಂದ ಮಾತ್ರವಲ್ಲ; ಜಗತ್ತಿನಲ್ಲೇ ಅತ್ಯಂತ ಹೆಚ್ಚು ಮಂದಿ ನೋಡಿದ ಫೋಟೋ ಎಂಬ ಹೆಗ್ಗಳಿಕೆಯೂ ಇದಕ್ಕಿದೆ! ಆದರೆ ಈ ಫೋಟೊ ತೆಗೆದವರು ಯಾರು.. ಎನ್ನುವುದು ಮಾತ್ರ ಬಹುತೇಕರಿಗೆ ಗೊತ್ತಿಲ್ಲ.

ನ್ಯೂಯಾರ್ಕ್‌ನ ವಿಶ್ವವಿಖ್ಯಾತ ಛಾಯಾಗ್ರಾಹಕ ಚಕ್'ಒ ರೇರ್ ಎಂಬಾತ ಈ ಚಿತ್ರದ ಛಾಯಾಗ್ರಾಹಕ. ಆತನಿಗೀಗ 69 ವರ್ಷ ವಯಸ್ಸು.

ಅದು 1996. ಅದೊಂದು ದಿನ ಚಕ್'ಒ ರೇರ್ ತನ್ನ ಗೆಳತಿ ಡಾಫ್ನೆ ಲಾರ್ಕಿನ್ ಳನ್ನು (ಈ ಗೆಳತಿಯನ್ನೇ ಬಳಿಕ ರೇರ್ ಮದುವೆ ಮಾಡಿಕೊಂಡ.) ಭೇಟಿಯಾಗಲೆಂದು ಕ್ಯಾಲಿಫೋರ್ನಿಯಾದ ನಾಪಾ ಕಣಿವೆಯಲ್ಲಿ ಹೋಗುತ್ತಿದ್ದಾಗ ಸೊಂಪಾಗಿ ಬೆಳೆದ ಹಸಿರು ಹುಲ್ಲುಗಾವಲು ಕಣ್ಣಿಗೆ ಬಿತ್ತು. ಹಿನ್ನೆಲೆಯಲ್ಲಿ ನೀಲಿ ಆಕಾಶ ಮತ್ತು ಬಿಳಿಯ ಮೋಡಗಳೂ ತಂಪಾಗಿದ್ದವು. ತಕ್ಷಣ ಕ್ಯಾಮೆರಾ ಹೊರತೆಗೆದು ಹಲವಾರು ದೃಶ್ಯಗಳನ್ನು ಸೆರೆ ಹಿಡಿದ. ಆ ಬಳಿಕ ಅದನ್ನು ಮರೆತೂ ಬಿಟ್ಟ. ಕೆಲವು ಸಮಯದ ಬಳಿಕ ಈತನ ಏಜೆಂಟ್ ಕರೆ ಮಾಡಿ, 'ಜಾಕ್‌ಪಾಟ್ ಹೊಡೆದಿದ್ದೀಯ. ಈ ಫೋಟೋದ ಒರಿಜಿನಲ್ ಬೇಕೆಂದು ಮೈಕ್ರೊಸಾಫ್ಟ್ ಕಂಪೆನಿ ಕೇಳುತ್ತಿದೆ' ಎಂದಾಗ ಈತನಿಗೆ ಅಚ್ಚರಿ. ಭಾರೀ ಮೊತ್ತ ನೀಡಿ ಚಿತ್ರವನ್ನು ಖರೀದಿಸಿದ ಮೈಕ್ರೋಸಾಫ್ಟ್ ಕಂಪೆನಿ ಚಿತ್ರವನ್ನು ತನ್ನಲ್ಲೇ ಇಟ್ಟುಕೊಂಡಿತ್ತು.

ರೇರ್ ತೆಗೆದ ಈ ಫೋಟೋವನ್ನು, ಅದರ ಅನನ್ಯತೆಗಾಗಿ ಗುರುತಿಸಿದ ವಿಂಡೋಸ್ ಎಕ್ಸ್‌ಪಿ ಕಂಪೆನಿ 'ನಿಜಕ್ಕೂ ಇದೊಂದು ರೇರ್ (ಅಪರೂಪದ) ಚಿತ್ರ' ಎಂದು ಭಾವಿಸಿತು. ಆಗಿನ್ನೂ ವಿಂಡೋಸ್ ಎಕ್ಸ್‌ಪಿ ಸಾಫ್ಟ್‌ವೇರ್ ಮಾರುಕಟ್ಟೆಗೆ ಬಂದಿರಲಿಲ್ಲ. ಆರು ವರ್ಷಗಳ ಬಳಿಕ ವಿಂಡೋಸ್ ಎಕ್ಸ್‌ಪಿ ಸಾಫ್ಟ್‌ವೇರ್ ಹೊರತಂದಾಗ ಕಂಪ್ಯೂಟರ್ ಸ್ಕ್ರೀನ್ ಬ್ಯಾಕ್‌ಗ್ರೌಂಡ್‌ಗೆ ಕಂಪೆನಿಯು ಈ ಫೋಟೋವನ್ನು ಬಳಸಿಕೊಂಡಿತು. ಹೀಗಾಗಿ ಪ್ರಪಂಚದ ಯಾವುದೇ ಮೂಲೆಯಲ್ಲಿ ಇವತ್ತು ಕಂಪ್ಯೂಟರ್ ಸ್ವಿಚ್ ಆನ್ ಮಾಡಿದರೂ ತಕ್ಷಣ ಡೆಸ್ಕ್‌ಟಾಪ್ ಮೇಲೆ ಮೂಡುವುದು ಇದೇ ಚಿತ್ರ..!

ಈ ಫೋಟೋಗೆ ಮೈಕ್ರೊಸಾಫ್ಟ್ ಎಷ್ಟು ಹಣ ನೀಡಿತು ಎನ್ನುವುದು ಗೊತ್ತಾಗಿಲ್ಲ. 'ಅದು ಕಾನ್ಫಿಡೆನ್ಶಿಯಲ್ ವಿಷಯ' ಎನ್ನುತ್ತಾರೆ ರೇರ್. ಆದರೆ ಇದು ವಿಶ್ವದ 'ಎರಡನೇ ಅತ್ಯಂತ ದುಬಾರಿ ಛಾಯಾಚಿತ್ರ' ಎಂದೂ ಖ್ಯಾತಿ ಗಳಿಸಿದೆ.

ಈ ಚಿತ್ರವನ್ನು ಚಕ್'ಒ ರೇರ್ 'ಹೈ ಟರ್ನ್' ಎಂಬ ಡಿಜಿಟಲ್ ಡಿಸೈನ್ ಕಂಪೆನಿಗಾಗಿ ಕ್ಲಿಕ್ಕಿಸಿದ್ದ. ಆದರೆ 'ಕ್ಲಿಕ್' ಆದದ್ದು ವಿಂಡೋಸ್ ಎಕ್ಸ್‌ಪಿ ಕಂಪೆನಿಯ ಮೂಲಕ! 1979ರಲ್ಲಿಯೇ ಈತ ನಾಪಾ ವ್ಯಾಲಿಯ ಸಾಕಷ್ಟು ಛಾಯಾಚಿತ್ರಗಳನ್ನು ನ್ಯಾಷನಲ್ ಜಿಯಾಗ್ರಾಫಿಕ್ ಮ್ಯಾಗಸಿನ್‌ಗಾಗಿ ತೆಗೆದಿದ್ದ. ಆ ಮ್ಯಾಗಸಿನ್‌ನಲ್ಲಿ ಹಲವು ವರ್ಷಗಳ ಕಾಲ ಛಾಯಾಗ್ರಾಹಕನಾಗಿಯೂ ರೇರ್ ಕೆಲಸ ಮಾಡಿದ್ದ.

'ನಾಪಾ ಮತ್ತು ಸ್ಯಾನ್‌ಫ್ರಾನ್ಸಿಸ್ಕೋದ ಕಣಿವೆಗಳಲ್ಲಿ ನಾನು ಅನೇಕ ಸಲ ಸಂಚಾರ ಮಾಡಿದ್ದೆ. ಉತ್ತಮ ಚಿತ್ರಕ್ಕಾಗಿ ಕಾಯುತ್ತಲೂ ಇದ್ದೆ. ಅವತ್ತು ಅದು ಜನವರಿ ತಿಂಗಳು. ಕಣಿವೆಯಲ್ಲಿ ದಟ್ಟ ಹಸುರು ಬಣ್ಣದ ಹುಲ್ಲುಹಾಸು ಕಂಗೊಳಿಸುತ್ತಿತ್ತು. ಇದೇ ತಕ್ಕ ಸಮಯ ಎಂದು ಹಲವಾರು ಫೋಟೊಗಳನ್ನು ಕ್ಲಿಕ್ಕಿಸಿದೆ' ಎಂದು ಚಕ್'ಒ ರೇರ್ ದೈನಿಕವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹಳೆಯ ನೆನಪುಗಳನ್ನು ಕೆದಕಿದ್ದಾನೆ.

ಈ ಅದ್ಭುತ ಛಾಯಾಗ್ರಾಹಕ ಕ್ಯಾಲಿಫೋರ್ನಿಯಾದ ಸೊನೊಮ ಕಣಿವೆಯ ಅನೇಕ ಸುಂದರ ಛಾಯಾಚಿತ್ರಗಳನ್ನೂ ತೆಗೆದಿದ್ದಾನೆ. ಆ ಹಿನ್ನೆಲೆಯಲ್ಲೇ ಜಾಗತಿಕವಾಗಿ 'ಅತ್ಯುತ್ತಮ ಛಾಯಾಚಿತ್ರಗ್ರಾಹಕ' ಎಂಬ ಮನ್ನಣೆಯೂ ಸಿಕ್ಕಿತ್ತು. ಈತ ಕ್ಲಿಕ್ಕಿಸಿದ ಇನ್ನೂ ಅನೇಕ 'ಲ್ಯಾಂಡ್‌ಸ್ಕೇಪ್' ಚಿತ್ರಗಳನ್ನು ವಿಶ್ವದ ನಾನಾ ಕಂಪೆನಿಗಳು ಖರೀದಿಸಿದ್ದು, ಇದರಲ್ಲಿ ಸಾಫ್ಟ್‌ವೇರ್ ಕಂಪೆನಿಗಳದ್ದೇ ಮೇಲುಗೈ. ಹಲವಾರು ದೇಶಗಳಲ್ಲಿ ತಮ್ಮ ಛಾಯಾಚಿತ್ರಗಳ ಪ್ರದರ್ಶನಗಳನ್ನೂ ಈತ ಏರ್ಪಡಿಸಿದ್ದಾನೆ.

ಛಾಯಾಗ್ರಾಹಕ ಚಕ್'ಒ ರೇರ್



■ ಅವನೀಶ್